# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **112 (115)** |
| **ಸದಸ್ಯರ ಹೆಸರು** | **ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **15-07-2024** |
| **ಉತ್ತರಿಸಬೇಕಾದ ಸಚಿವರು** | **ಉನ್ನತ ಶಿಕ್ಷಣ ಸಚಿವರು** |

| | **ಪ್ರಶ್ನೆ** | **ಉತ್ತರ** |
|---|---|---|
| ಅ) | 2021 ರ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪ್ರತಿ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 1242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಾವಳಿಗಳನ್ನು ರೂಪಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/257/ಡಿಸಿಇ/2019(ಭಾ-3), ದಿನಾಂಕ:08.07.2020 ಮತ್ತು ತಿದ್ದುಪಡಿ ಅಧಿಸೂಚನೆ ದಿನಾಂಕ:19.10.2020 ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ವಿಶೇಷ ನೇಮಕಾತಿ ನಿಯಮಗಳನ್ವಯ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/257/ಡಿಸಿಇ/2019, ದಿನಾಂಕ:26.08.2021 ರಂದು ಹೊರಡಿಸಲಾಗಿರುತ್ತದೆ.<br><br>ಸದರಿ ಸರ್ಕಾರಿ ಅಧಿಸೂಚನೆಯನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ:30.09.2021 ರಂದು ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ, ಆಯ್ಕೆಯಾದ 1208 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ:03.11.2023 ರ ಅಧಿಸೂಚನೆ ಸಂಖ್ಯೆ:ಇಡಿ 92 ಡಿಸಿಇ 2023(ಇ) ರಲ್ಲಿ ಪ್ರಕಟಿಸಲಾಗಿರುತ್ತದೆ.<br><br>ಅಂತಿಮ ಆಯ್ಕೆಪಟ್ಟಿಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವ 1208 ಅಭ್ಯರ್ಥಿಗಳ ನೇಮಕಾತಿ ಅರ್ಹತೆಗೆ ಸಂಬಂಧಿಸಿದಂತೆ, ಸರ್ಕಾರದ ಪತ್ರ ಸಂಖ್ಯೆ: ಇಡಿ 92 ಡಿಸಿಇ 2023(ಇ), ದಿನಾಂಕ:06.11.2023 ರಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ವಿದ್ಯಾರ್ಹತೆ, ಮೀಸಲಾತಿ ಇನ್ನಿತರ ಅಗತ್ಯ ದಾಖಲೆಗಳ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ನೈಜತೆ ವರದಿಗಳನ್ನು ಪಡೆಯಲು ಕ್ರಮವಹಿಸುವಂತೆ ಆಯ್ಕೆ ಪ್ರಾಧಿಕಾರಿಯಾದ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ತಿಳಿಸಲಾಗಿರುತ್ತದೆ. ಅದರಂತೆ, ಅಗತ್ಯ ದಾಖಲಾತಿಗಳ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಂಡ ಒಟ್ಟು 1097 ಸಹಾಯಕ ಪ್ರಾಧ್ಯಾಪಕ ಅಭ್ಯರ್ಥಿಗಳ ವರದಿ ಸರ್ಕಾರದಲ್ಲಿ ಸ್ವೀಕೃತಗೊಂಡಿರುತ್ತದೆ. |
| ಆ) | ಆಯ್ಕೆ ಪಟ್ಟಿ, ಅಧಿಸೂಚನೆಯಾದ ನಂತರ ಎಲ್ಲಾ ಪರಿಶೀಲನಾ ಕಾರ್ಯ ಶೇ.90% ರಷ್ಟು ಪೂರ್ಣಗೊಂಡರೂ ಅಭ್ಯರ್ಥಿಗಳಿಗೆ ಆದೇಶ ನೀಡಲು ತಡವಾಗುತ್ತಿರುವುದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆಯೇ; | |
| ಇ) | ಹೈದ್ರಾಬಾದ್ ಕರ್ನಾಟಕ ವಿಭಾಗದ ಮೀಸಲಾತಿ ವಿಷಯವಾಗಿ ಬಂದಂತಹ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/03/ಹೈಕಕೋ/2019, ದಿನಾಂಕ: 01.02.2023ನ್ನು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಎತ್ತಿ ಹಿಡಿದಿದ್ದು, ಇದೇ ವಿಷಯವಾಗಿ 13 ಮಾರ್ಚ್ 2024 ರಂದು ಉಚ್ಚ ನ್ಯಾಯಾಲಯದ ಮಧ್ಯಂತರ ತೀರ್ಪು ಸಹ ಕೌನ್ಸಿಲಿಂಗ್ ನಡೆಸಿ, ಸ್ಥಳನಿಯುಕ್ತಿಗೊಳಿಸಬಹುದೆಂದು ಆದೇಶ ನೀಡಿದ್ದು, ಆದರೂ ತಡವಾಗಲು ಕಾರಣಗಳೇನು; | |
| ಈ) | ಈ ಆದೇಶಾನುಸಾರ ಸರ್ಕಾರವು ಈಗಾಗಲೇ K.P.T.C.L ಇಲಾಖೆಯ A.E. ಹುದ್ದೆಗಳಿಗೆ ಪ್ರಾಥಮಿಕ ಶಾಲಾ ಸಾಕ್ಷರತಾ ಇಲಾಖೆಯ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ ಹುದ್ದೆಗಳಿಗೆ (G.P.S.T.R) P.W.D ಇಲಾಖೆಯ ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ಮತ್ತು RDPR ಇಲಾಖೆಯ AE ಹುದ್ದೆಗಳಿಗೆ ಷರತ್ತು ಬದ್ಧ ನೇಮಕಾತಿ ಆದೇಶವನ್ನು ಮತ್ತು ತಾತ್ಕಾಲಿಕ ಸ್ಥಳ ನಿಯುಕ್ತಿ ಮಾಡಿದ್ದು, ಈ ಎಲ್ಲಾ ಹುದ್ದೆಗಳಿಗೆ ಆದೇಶ ನೀಡಿರುವಾಗ ಸಹಾಯಕ ಪ್ರಾಧ್ಯಾಪಕರಿಗೆ ನೀಡದಿರಲು ಕಾರಣವೇನು; | |
| ಉ) | ಮೂರು ವರ್ಷಗಳು ಕಳೆದರೂ ಅನಗತ್ಯ ನೆಪ ಹೇಳಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡದೇ ಮುಂದೂಡುತ್ತಿರುವುದಕ್ಕೆ ಕಾರಣಗಳೇನು? (ಪೂರ್ಣ ಮಾಹಿತಿ ನೀಡುವುದು) | |

| | | |
|---|---|---|
| | | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಸಂಖ್ಯೆ:ಸಿಆಸುಇ/03/ಹೈಕಕೋ/2019, ದಿನಾಂಕ:01.02.2023 ರಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳು ಪಾಲಿಸಬೇಕಾದ ವಿಧಿ-ವಿಧಾನಗಳ ಬಗ್ಗೆ ತಿಳಿಸುತ್ತಾ, ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸದೇ ಇದ್ದಲ್ಲಿ ಅಂತಹ ನೇಮಕಾತಿ ಪ್ರಕ್ರಿಯೆಗಳಲ್ಲಿ ಮೆರಿಟ್ ಪಟ್ಟಿಯಿಂದ ಆಯ್ಕೆಪಟ್ಟಿ ತಯಾರಿಸುವಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸುವುದು. ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪರಿಗಣಿಸಿ ಆಯ್ಕೆಪಟ್ಟಿ ತಯಾರಿಸುವಂತೆ ಸೂಚಿಸಲಾಗಿರುತ್ತದೆ.<br><br>ಆದರಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ:01.02.2023 ರ ಸುತ್ತೋಲೆಯನ್ವಯ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ದಿನಾಂಕ:17.02.2023 ರಂದು ಪ್ರಕಟಿಸಿ, ತದನಂತರ ದಿನಾಂಕ:03.03.2023 ರಂದು 1208 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.<br><br>ಈ ಅಂತಿಮ ಆಯ್ಕೆಪಟ್ಟಿಯಿಂದ ಬಾಧಿತರಾದ ಅಭ್ಯರ್ಥಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಮೊರೆ ಹೋಗಿದ್ದು, ಮಾನ್ಯ ಆಡಳಿತ ನ್ಯಾಯಮಂಡಳಿಯು ದಿನಾಂಕ:22.09.2023 ರಂದು ನೀಡಿದ ತೀರ್ಪಿನಲ್ಲಿ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸಿ ಅರ್ಜಿಗಳನ್ನು ವಜಾಗೊಳಿಸಿರುತ್ತದೆ.<br><br>ಸದರಿ ತೀರ್ಪನ್ನು ಪ್ರಶ್ನಿಸಿ, ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿದ್ದ WP No.1464/2024 ಹಾಗೂ ಇಂತಹುದೇ ಸಮನಾಂತರ ಪ್ರಕರಣಗಳಾದ WP No. 28614/2023, 3455/2024, 1633/2024, 2034/2024, 1900/2024, ಪ್ರಕರಣಗಳನ್ನು ಒಟ್ಟುಗೂಡಿಸಿ ದಿನಾಂಕ:13/03/2024 ರಂದು ವಿಚಾರಣೆ ನಡೆಸಿದ ಸಂದರ್ಭದಲ್ಲಿ ಮಾನ್ಯ ರಾಜ್ಯ ಉಚ್ಛ ನ್ಯಾಯಾಲಯವು ಈ ಕೆಳಕಂಡಂತೆ ಮಧ್ಯಂತರ ಆದೇಶ ನೀಡಿರುತ್ತದೆ.<br>"Accordingly, the impugned order rendered by the KSAT in Application No.1512-1516/2023 vide Annexure-"B" is stayed. Further, the final selection |

| | | |
|---|---|---|
| | | list dated 03.03.2023 to the post of Assistant Professors vide Annexure-"A9" series is hereby stayed and the interim order of stay is confined to the petitioners only. It is clarified that the respondent / Authority shall not fill up the posts from which the petitioners have been displaced. However, the stay granted in this petition is subject to the result of this petition.<br><br>...... It is clarified that the state shall proceed with the counselling. However, the said counselling process shall be subject to the result of these petitions."<br><br>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆ ಹೊಂದಿದ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಾಧಿಕಾರವಾದ ಸರ್ಕಾರವು ನೇಮಕಾತಿ ಆದೇಶ ಹೊರಡಿಸಿದ ನಂತರ ಅವರುಗಳಿಗೆ ಇಲಾಖೆಯ ವರ್ಗಾವಣೆ ನಿಯಮಗಳು, 2021 ರ ನಿಯಮ 9(2) ರನ್ವಯ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸಿ, ಸ್ಥಳ ನಿಯುಕ್ತಿಗೊಳಿಸಬೇಕಾಗಿರುತ್ತದೆ. ಆದರೆ, ದಿನಾಂಕ:16.03.2024 ರಂದು ಲೋಕಸಭಾ ಚುನಾವಣೆ ಘೋಷಣೆಯ ಪ್ರಯುಕ್ತ ಚುನಾವಣಾ ನೀತಿ ಸಂಹಿತೆ ಜಾರಿಗೆ ಬಂದಿದ್ದರಿಂದ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.<br><br>ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯವು ಮೇಲಿನ ಎಲ್ಲಾ ಪ್ರಕರಣಗಳನ್ನು WA 1218/2023 ಪ್ರಕರಣದೊಂದಿಗೆ ಜೋಡಿಸಲಾಗಿದ್ದು, ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ತೀರ್ಪಿನನ್ವಯ ಕ್ರಮವಹಿಸಲಾಗುವುದು. |

ಇಡಿ 174 ಡಿಸಿಇ 2024 (ಇ)

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು